ಉ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಿಸ್ತೀರ್ಣ 1213.69 ಚ.ಕಿ.ಮೀ. ಪ್ರಸ್ತುತ ಯಾವುದೇ ಪ್ರದೇಶವನ್ನು ಹೊಸದಾಗಿ ಪ್ರಾಧಿಕಾರಕ್ಕಾಗಿ ವಶಪಡಿಸಿಕೊಳ್ಳುವ ಪ್ರಸ್ತಾವನೆ ಇರುವುದಿಲ್ಲ.

1605(1902) ಶ್ರೀ ಮಲ್ಲಿಕಾರ್ಜುನ್‌ಸಿದ್ದರಾಮಪ್ಪ ಖೂಬ (ಬಸವ ಕಲ್ಯಾಣ) ಮಾನ್ಯ ಮುಖ್ಯ ಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ರಾಜ್ಯದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಎಷ್ಟು ಪೊಲೀಸ್ ಠಾಣೆ ಇರಬೇಕಿತ್ತು ಹಾಗೂ ಸದ್ಯದಲ್ಲಿ ಅಸ್ತಿತ್ವದಲಿರುವ ಪೊಲೀಸ್ ಠಾಣೆಗಳ ಸಂಖ್ಯೆಗಳು ಎಷ್ಟು ?

ಆ. ಹೊಸದಾಗಿ ಪೊಲೀಸ್ ಠಾಣೆಗಳ ಸ್ಥಾಪನೆಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಇ. ಜನಸಂಖ್ಯೆಗೆ ಅನುಗುಣವಾಗಿ ಎಷ್ಟು ಜನ ಸಿ.ಪಿ.ಐ.ಗಳು ಡಿ. ವೈ.ಎಸ್.ಪಿ.ಗಳು ಇದ್ದಾರೆ.

ಈ. ಎಷ್ಟು ಕ್ರೈಂ ಬ್ರಾಂಚ್ ಠಾಣೆಗಳು ಇವೆ?

ಉ. ಜನಸಂಖ್ಯೆಗೆ ಅನುಗುಣವಾಗಿ ಎಷ್ಟು ಜನರಿಗೆ ಒಬ್ಬ ಪೊಲೀಸ್ ಪೇದೆ ಹಾಗೂ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳಿವೆ. (ವಿವರ ಒದಗಿಸುವುದು)

ಶ್ರೀ ಧರಂಸಿಂಗ್ (ಮುಖ್ಯಮಂತ್ರಿಯವರು) :

ಅ. ಧರ್ಮವೀರ ರಾಷ್ಟ್ರೀಯ ಪೊಲೀಸ್ ಕಮಿಷನ್ ವರದಿಯ ಪ್ರಕಾರ ಜನಸಂದಣಿ ಪ್ರಮಾಣ 50,000 ದಿಂದ 60000 ಕ್ಕೆ ಒಂದು ಠಾಣೆಯೆಂದು ಸೂಚಿಸಲಾಗಿದೆ. ಈ ಪ್ರಕಾರ ಗಣನೆಗೆ ತೆಗೆದುಕೊಂಡರೆ 2001ರ ಜನಗಣತಿ ಅನುಸಾರ ರಾಜ್ಯದ ಜನಸಂಖ್ಯೆ 5,27,33,958ಗೆ 878 ಠಾಣೆಗಳು ಬೇಕಾಗಿರುತ್ತದೆ.

ಪ್ರಸ್ತುತ ಅಸ್ತಿತ್ವದಲ್ಲಿ ಇರುವ ಠಾಣೆಗಳ ಸಂಖ್ಯೆ 805.

ಆ. ಅಗತ್ಯತೆಗೆ ಅನುಗುಣವಾಗಿ ಪೊಲೀಸ್ ಠಾಣೆಗಳ ಸೃಜನೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ. ಜನಸಂಖ್ಯೆಗೆ ಅನುಗುಣವಾಗಿ ಇಂತಿಷ್ಟೇ ಸಿ.ಪಿ.ಐ., ಡಿ.ವೈ.ಎಸ್.ಪಿ. ಮತ್ತು ಎಸ್.ಪಿ.ಗಳು ಇರಬೇಕೆಂಬ ನಿರ್ದಿಷ್ಟ ಅನುಸೂಚಿಯಿರುವುದಿಲ್ಲ.

ಈ. ರಾಜ್ಯದಲ್ಲಿ ಪ್ರತ್ಯೇಕ ಕ್ರೈಂ ಬ್ರಾಂಚ್ ಠಾಣೆಗಳನ್ನು ಸೃಜನೆ ಮಾಡಿರುವುದಿಲ್ಲ.

ಉ. ಜನಸಂಖ್ಯೆಗೆ ಅನುಗುಣವಾಗಿ ಪೊಲೀಸ್ ಸಿಬ್ಬಂದಿ ಇಂತಿಷ್ಟೇ ಇರಬೇಕೆಂಬ ಬಗ್ಗೆ ಯಾವುದೇ ಮಾರ್ಗಸೂಚಿ ಇರುವುದಿಲ್ಲ. ಆದಾಗ್ಯೂ, 2001 ನೇ ಜನಗಣತಿ ಆಧರಿಸಿ, ಪ್ರತಿ 1063 ಜನರಿಗೆ ಒಬ್ಬ ಪೊಲೀಸ್ ಪೇದೆ ಹಾಗೂ 18,172 ಜನರಿಗೆ ಒಬ್ಬ ಪಿ.ಎಸ್.ಐ. ಎಂಬ ಅನುಪಾತವನ್ನು ನಿಗದಿಪಡಿಸಿ ಹುದ್ದೆಯನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

1606(1903) ಶ್ರೀ ಮಲ್ಲಿಕಾರ್ಜುನ್ ಸಿದ್ದರಾಮಪ್ಪಖೂಬ(ಬಸವಕಲ್ಯಾಣ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ರಾಜ್ಯದಲ್ಲಿ ನೀರಾವರಿ ಕಾಮಗಾರಿ ಗುತ್ತಿಗೆದಾರರಿಗೆ ಇಲ್ಲಿಯವರೆಗೆ ಪಾವತಿಸಬೇಕಾದ ಒಟ್ಟು ಮೊತ್ತವೆಷ್ಟು ;